SRI G.B. SHANKAR RAO.—At the moment, we have not decided whether to give it to the private agency or not.

MR. SPEAKER.—The Hon'ble Minister says that at the moment they have not decided to hand it over to any private agency.

Opening of Engineering College in Kolar District

240. SRI J.M. REDDY (Mulbagal).—Will the Minister for Education be pleased to state.—

(a) the number of Engineering Colleges in Kolar District;

(b) if it is not so, the reasons for not sanctioning these colleges by the Government in Kolar District;

(c) whether the Government have proposed to sanction shortly; if so, when;

(d) whether the Government have proposed to sanction polytechnic School in Mulbagal?

SRI G.B. SHANKAR RAO (Minister for Education)—

(a) There are no Colleges.

(b) The Colleges have not been sanctioned on District-wise basis.

(c) and (d) No.

ಶ್ರೀ ಜೆ.ಎಂ. ರೆಡ್ಡಿ.—ನನ್ನ ಪ್ರಶ್ನೆಗೆ 'ಸೊನ್ನೆ' ಉತ್ತರ ಬಂದಿದೆ. ಕೋಲಾರ ಹಿಂದುಳಿದಿರತಕ್ಕ ಜಿಲ್ಲೆ. ಆದ್ದರಿಂದ ಸರ್ಕಾರ ಈಗಲಾದರೂ ಮನಸ್ಸು ಮಾಡಿ ಇಲ್ಲಿಗೆ ಎಂಜಿನಿಯರಿಂಗ್ ಕಾಲೇಜನ್ನು ಕೊಡಲಿ, ಪಾಲಿಟೆಕ್ನಿಕ್‌ನ್ನೂ ಪ್ರಾರಂಭಿಸಲು ಸಿದ್ಧವಿದೆಯೇ?

SRI G.B. SHANKAR RAO.—We have not decided to start ourselves any Engineering Colleges district-wise and the establishment of an Engineering College in a district depends upon the need of the area.

ಶ್ರೀ ಪಿ.ಎನ್. ರೆಡ್ಡಿ.—ಕೋಲಾರ ಜಿಲ್ಲೆಗೆ ಎಂಜಿನಿಯರಿಂಗ್ ಕಾಲೇಜು ಕೊಟ್ಟಿಲ್ಲ ಎಂದು ಹೇಳಿದಿರಿ. ಮಿಕ್ಕ ಎಲ್ಲ ಜಿಲ್ಲೆಗಳಿಗೂ ಕಾಲೇಜು ಕೊಟ್ಟಿದ್ದಾರೆ. ಆದರೆ ಕೋಲಾರ ಜಿಲ್ಲೆಗೆ ಕಾಲೇಜನ್ನು ಕೊಡಲು ಏಕೆ ಮನಸ್ಸು ಮಾಡಿಲ್ಲ? ಈ ವಿದ್ಯಾ ಮಂತ್ರಿಗಳ ಕಾಲದಲ್ಲೇ ಅದು ಬರುತ ದೆಯೇ?

ಶ್ರೀ ಜಿ.ಬಿ. ಶಂಕರರಾವ್.—ಅಲ್ಲಿ ಯಾರು ಕೊಡಿ ಎಂದು ಕೇಳಿದ್ದಾರೆ? ಹಾಗೂ ಇವರು ಯಾರಿಗೆ ಕೊಡಬೇಕು ಎಂದು ಹೇಳಬೇಕು. ಯಾರು ಕಾಲೇಜನ್ನು ಕೇಳಿದ್ದಾರೆ?

ಶ್ರೀ ಪಿ.ಎನ್. ರೆಡ್ಡಿ.— ಅಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಈ ಬಗ್ಗೆ ಆರ್ಜಿ ಸಲ್ಲಿಸಿದ್ದಾರೆ. ಆದರೆ ಈ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ಆದ್ದರಿಂದ ಈಗಲಾದರೂ ಕೋಲಾರ ಜಿಲ್ಲೆಗೆ ಇಂಜಿನಿಯರಿಂಗ್ ಕಾಲೇಜನ್ನು ಕೊಡುವುದಕ್ಕೆ ಆಜ್ಞೆ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಸರ್ಕಾರ ತನ್‌ತಾನೇ ಎಂಜಿನಿಯರಿಂಗ್ ಪದವಿ ಕಾಲೇಜನ್ನು ಮಾಡುವುದಕ್ಕೆ ನಿರ್ಧಾರ ಮಾಡಿಲ್ಲ. ಹಾಗೆ ಮಾಡಲು ಸಾಧ್ಯವೂ ಇಲ್ಲ. ಹಾಗೆ ಮಾಡಲು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ.

ಶ್ರೀ ಪಿ.ಎನ್. ರೆಡ್ಡಿ.—ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕೊಡಬೇಕು, ಕೋಲಾರ ಜಿಲ್ಲೆಗೆ ಮಾತ್ರ ಕೊಡಬಾರದು ಎಂಬುದೇಕೆ ?

ಶ್ರೀ ಜಿ.ಬಿ. ಶಂಕರರಾವ್.—ಅಲ್ಲಿ ಕಾಲೇಜ್ ತೆರೆಯಲು ಯಾರು ಅರ್ಜಿ ಹಾಕಿದ್ದಾರೆ ? ಯಾರಾದರೂ ಕೇಳಿರುವುದರ ಬಗ್ಗೆ ಮಾಹಿತಿ ಇದ್ದರೆ ಕೊಡಲಿ. ಸರ್ಕಾರ ತಾನೇ ತೆರೆಯಲು ಹೊರಟಿಲ್ಲ.

ಶ್ರೀ ಪಿ.ಎನ್. ರೆಡ್ಡಿ.—ಅರ್ಜಿ ಕೊಟ್ಟಿದ್ದೇವೆ. ಈ ಬಗ್ಗೆ ಶಾಸನಸಭೆಯಲ್ಲಿ ಶಾಸಕರಾದ ನಾವೂ ಸಹಾ ಹೇಳಿದ್ದೇವೆ. ಇದು ವರದಿಯಲ್ಲಿ ಇದೆ. ನಾವು ಶಾಸನಸಭೆಯಲ್ಲಿ ಹೇಳಿದಮೇಲೂ ತಾವು ಮನಸ್ಸು ಮಾಡಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಶಾಸನಸಭೆಯಲ್ಲಿ ಮಾನ್ಯ ಸದಸ್ಯರು ಮಾತನಾಡಿರಬಹುದು. ಅವರು ಎಂಜಿನಿಯರಿಂಗ್ ಕಾಲೇಜನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆಯೇ ಹೊರತು ಯಾರಿಗೆ ಕೊಡಬೇಕೆಂದು ಹೇಳುತ್ತಿಲ್ಲ. ರಾಜ್ಯದಲ್ಲಿ ಸಾಕಷ್ಟು ಎಂಜಿನಿಯರಿಂಗ್ ಕಾಲೇಜುಗಳು ಇವೆ. ಪ್ರತಿಯೊಂದು ಜಿಲ್ಲೆಗೂ ಕೊಡಬೇಕೆಂದು ನಿರ್ಧಾರ ಮಾಡಿಲ್ಲ. ಇದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುವುದರಿಂದ ನಾವೇ ಮಾಡುವುದಕ್ಕೆ ಸಾಧ್ಯವಿಲ್ಲ.

Overdraft benefit to the State Government

112. SRI A. LAKSHMISAGAR (Chickpet) and

SRI S.R. BOMMAI (Hubli Rural)—Will the Minister for Finance and Tourism be pleased to state.—

The maximum overdraft benefit, the State Government has had during the years 1980–81 and 1981–82 upto 31st December 1981, monthly figures may be furnished ?

SRI M. VEERAPPA MOILY (Minister for Finance and Tourism).—

(The maximum monthly overdraft benefit to the State Government had from April 1980 to end of December 1981 is as follows :)

Year	Month	Overdraft (Rs. in Crores)
1980 ...	April	35.33
	May	13.57
	June	0.96
	July	1.80
	August	7.58
	September	—
	October	5.23
	November	9.06
	December	18.13
1981 ..	January	12.29
	February	12.73
	March	22.71
	April	57.28
	May	59.06
	June	48.83